ಎಕ್ಸಿಕ್ಯೂಷನ್ ನಂ ಃ 05-2012 ಪಿಡಬ್ಲು-1

ಅರ್ಜಿಯ ಮೇರೆಗೆ ಸಾಕ್ಷಿಯನ್ನು ದಿನಾಂಕಃ 01.02.2019 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃ ಎದುರುದಾರರ ಪರ ಶ್ರೀ ಎನ್ ಹೆಚ್ ಪಿ ವಕೀಲರಿಂದ

ಯಾವ ಸರ್ವೆ ನಂಬರ್ 16 ಮತ್ತು 22 ರಲ್ಲಿ ಕಬ್ಬು ಬೆಳೆದಿದ್ದೇವೆ, ಸುಮಾರು 10 ವರ್ಷದಿಂದ ನನ್ನ ಚಿಕ್ಕಪ್ಪನ ಮಕ್ಕಳು ಕಬ್ಬು ಬೆಳೆಯುತ್ತಿದ್ದಾರೆ, ಅದರ ಅದಾಯವನ್ನು ನಾವೇ ಪಡೆಯುತ್ತಿದ್ದೇವೆ ಅಂದರೆ ಸರಿ. ಕಬ್ಬನ್ನು ಬೋರ್‌ವೆಲ್ ನೀರಿನಿಂದ ಬೆಳೆಯುತ್ತಿದ್ದೇವೆ. ಅದು ಎಷ್ಟು ಇಳುವರಿ ಇದೆ ಪ್ರತಿವರ್ಷ ಅದಾಯ ಬರುತ್ತಿದೆ ಅಂತ ಹೇಳಲು ಆಗುವುದಿಲ್ಲ. ಪ್ರತಿವರ್ಷ ಕೆಲವೊಂದು ಬಾರಿ 5-10 ಸಾವಿರ ಅದಾಯವನ್ನು ನನ್ನ ಚಿಕ್ಕಪ್ಪನ ಮಕ್ಕಳು ನನಗೆ ಕೊಡುತ್ತಾರೆ. ಪ್ರತಿವರ್ಷ ಬೆಳೆದ ಕಬ್ಬನ್ನು ಕಾರ್ಖಾನೆಗೆ ಕೊಟ್ಟಾಗ ಅಲ್ಲಿ ರಶೀದಿ ಕೊಡುತ್ತಾರೆ ಅಂದರೆ ಸರಿ, ಆ ರಶೀದಿಯನ್ನು ಈಗ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಯಾರ ಮನೆ ವಿದ್ಯುಚ್ಛಕ್ತಿ ವ್ಯವಸ್ಥೆ ಕೊಡುತ್ತಾರೆ ಅವರ ಹೆಸರಿಗೆ ಬಿಲ್‌ನ್ನು ಕೊಡುತ್ತಾರೆ ಅಂದರೆ ಸರಿ. ಅದೇ ರೀತಿ ಕಂದಾಯವನ್ನು ತುಂಬುತ್ತಾರೆ ಅವರ ಹೆಸರನ್ನು ರಶೀದಿಯಲ್ಲಿ ನಮೂದು ಮಾಡುತ್ತಾರೆ ಅಂದರೆ ಸರಿ. ಕಂದಾಯ ತುಂಬಿದ ಬಗ್ಗೆ ರಶೀದಿಯನ್ನು ಹಾಜರುಪಡಿಸಿದ್ದೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ದಾಖಲೆಗಳನ್ನು ನೋಡಿ ಕಂದಾಯ ರಶೀದಿಗಳು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಅಂತ ನುಡಿಯುತ್ತಾರೆ. ನಿಡಿ 3 ರ ಪ್ರಕಾರ ಎಸ್ ಎಸ್ ಧವಳೆರವರು ಕಂದಾಯ ತುಂಬಿದ್ದಾರೆ ಅಂದರೆ ಸರಿಯಲ್ಲ. ಅದೇ ರೀತಿ ನಿಡಿ 4 ರ ಪ್ರಕಾರ ಬಾಸೆಲ್ ಮಿಷನ್ ಚರ್ಚ್ ಹುಬ್ಬಳ್ಳಿ ಚೆರ್‌ಮೆನ್‌ಹೆಸರು ಕಂದಾಯ ರಶೀದಿಯಲ್ಲಿ ನಮೂದಾಗಿದೆ ಅಂದರೆ ಗೊತ್ತಿಲ್ಲ. ಅದೇ ಪ್ರಕಾರ ನಿಡಿ 4 ರಲ್ಲಿ ಖಾತೆ ನಂ 19 ಅಂತ ಅವರ ಹೆಸರಿಗೆ ನಮೂದಾಗಿದೆ ಅಂದರೆ ಗೊತ್ತಿಲ್ಲ. ಅದೇ ರೀತಿ 5 ರ ಪ್ರಕಾರ ಬಾಸೆಲ್ ಮಿಷನ್ ಚರ್ಚ್ ಹುಬ್ಬಳ್ಳಿ ಚೆರ್‌ಮೆನ್ ರವರ ಪರ ರವೀಂದ್ರ ಧವಳೆರವರು 2007-08ರಲ್ಲಿ ಕಂದಾಯ ಪಾವತಿ ಮಾಡಿದ ಬಗ್ಗೆ ಅವರ ಹೆಸರು ದಾಖಲಾಗಿದೆ ಅಂದರೆ ಸರಿಯಲ್ಲ. ರವೀಂದ್ರ ಧವಳೆರವರು ಸರ್ವೆ ನಂ 16 ರಲ್ಲಿ ಬೋರ್‌ವೆಲ್ ಹಾಕಿಸಿ ಅದಕ್ಕೆ ವಿದ್ಯುಚ್ಛಕ್ತಿ ಸಂಪರ್ಕ ಪಡೆದಿದ್ದಾರೆ ಅಂದರೆ ಸರಿಯಲ್ಲ. ಸರ್ವೆ ನಂ 16ರ ಜಮೀನು 1960 ರಿಂದ ಇಲ್ಲಿಯತನಕ ಬಾಸೆಲ್ ಮಿಷನ್ ಚರ್ಚ್ ಹುಬ್ಬಳ್ಳಿ ಚೆರ್‌ಮೆನ್‌ರವರ ಹೆಸರಿನಲ್ಲಿ ಇದೆ ಅಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಎಲ್ಲಾ ದಾಖಲೆಗಳನ್ನು ಸೃಷ್ಟಿಮಾಡಿದ್ದಾರೆ ಅಂತ ಹೇಳುತ್ತಾರೆ.

ಈ ಹಂತದಲ್ಲಿ ಎದುರುದಾರರ ಪರ ವಕೀಲರು ಅಸಲು ದಾವಾ ನಂ 10/2012ರ ದಾಖಲೆಗಳು ಪಾಟಿ ಸವಾಲಿಗೆ ಅವಶ್ಯಕತೆ ಇದ್ದು, ಸದರಿ ದಾಖಲೆಗಳನ್ನು ಮಾನ್ಯ ನ್ಯಾಯಾಲಯದ ದಾಖಲಾತಿ ಕೊಠಡಿಯಿಂದ ಹಾಜರುಪಡಿಸಬೇಕೆಂದು ಕೇಳಿಕೊಂಡ ಮೇರೆಗೆ ಮುಂದುವರೆದ ಪಾಟಿ ಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಅದೆ,

ಸಹಿ/-

ದಿವಾಣಿ ನ್ಯಾಯಾಧೀಶರು ಹಾಗೂ

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,